**ಎಮ ವಿ.ಸಿ.ನಂ. 553/23**
**ಆರ್ ಡಬ್ಲ್ಯೂಃ 1**

**ದಿಃ 12-06-2026** ರಂದು ಸಾಕ್ಷಿಯನ್ನು **ಕರೆಸಿ ಪ್ರತಿಜ್ಞೆ ಮಾಡಿಸಲಾಯಿತು.**

**ಮುಖ್ಯ ವಿಚಾರಣೆಃ** 3 ನೇ ಎದುರುದಾರರ ಪರ ಶ್ರೀ ಪಿ ಎಂ ಸಿ ವಕೀಲರಿಂದಃ

ನಾನು ನನ್ನ ಮುಖ್ಯ ವಿಚಾರಣೆಯ ಪ್ರಮಾಣ ಪತ್ರ ಸಲ್ಲಿಸಿದ್ದು, ಅದರಲ್ಲಿ ಬರೆದ ಎಲ್ಲಾ ವಿಷಯಗಳು ಸರಿಯಾಗಿದ್ದು ಸತ್ಯವಾಗಿರುತ್ತವೆ.

ಮೇಲಾಧಿಕಾರಿಗಳು ಸಾಕ್ಷಿ ನುಡಿಯಲು ನೀಡಿದ ಅಧಿಕಾರ ಪತ್ರವನ್ನು ನಿಆರ್-1, ವಿಮಾ ಪಾಲಸಿ ಪ್ರತಿಯನ್ನು ನಿಆರ್-2, ಕೋರಿಯುರ್ ರಶೀದಿಯನ್ನು ನಿಆರ್-3, ನೋಟೀಸಿನ ಕಚೇರಿ ಪ್ರತಿಯನ್ನು ನಿಆರ್ -4 ಎಂದು ಗುರುತಿಸಲಾಯಿತು.

ಪಾಟೀ ಸವಾಲುಃ ಅರ್ಜಿದಾರರ ಪರ ಶ್ರೀ ಎಸ್ ವಿ ಬಿ ವಕೀಲರಿಂದಃ

ಅಪಘಾತವಾದ ದಿನದಂದು ವಿಮಾ ಪಾಲಸಿ ಚಾಲ್ತಿಯಲ್ಲಿ ಇತ್ತು ಅಂದರೆ ನಿಜ. ಅಪಘಾತ ಪಡಿಸಿದ ವಾಹನದ ಚಾಲಕ ವಾಹನವನ್ನು ವೇಗವಾಗಿ ಚಲಾಯಿಸಿಕೊಂಡು ಹೋಗಿ ಅರ್ಜಿದಾರ ಹಾಗೂ ಇತರರಿಗೆ ಡಿಕ್ಕಿ ಪಡಿಸಿರುತ್ತಾನೆ ಅಂದರೆ ನಿಜ. ಅರ್ಜಿದಾರ ವಿಮಾ ಕಂಪನಿಗೆ 3 ನೇ ಪಕ್ಷಗಾರನಾಗಿದ್ದು ಪರಿಹಾರ ಪಡೆದುಕೊಳ್ಳಲು ಹಕ್ಕುದಾರ ಅಂದರೆ ಸರಿಯಲ್ಲ. ಅಪಘಾತವಾದ ಸಮಯದಲ್ಲಿ ಪೋಲೀಸರು ವಾಹನ ಚಾಲಕ ಸೂಕ್ತವಾದ ವಾಹನ ಚಾಲನಾ ಪರವಾನಿಗೆ ಹೊಂದಿದ್ದ ಎಂದು ನಮೂದಿಸಿದ್ದಾರೆ ಅಂದರೆ ಸರಿಯಲ್ಲ. ಅಪಘಾತವು ನಮ್ಮ ವಿಮಾ ಕಂಪನಿಯ ವಾಹನ ಚಾಲಕನ ನಿರ್ಲಕ್ಷತನದಿಂದ ಆಗಿರುವುದರಿಂದ ಪರಿಹಾರ ನೀಡಲು ನಾವೇ ಬಾಧ್ಯಸ್ಥರು ಅಂದರೆ ಸರಿಯಲ್ಲ. ಚಾಲಕ ವಾಹನ ಚಾಲನಾ ಪರವಾಣಿಗೆ ಹೊಂದಿರಲಿಲ್ಲ ಆದ್ದರಿಂದ ನಾವು ಪರಿಹಾರ ನೀಡಲು ಬಾಧ್ಯಸ್ಥರಲ್ಲ ಅಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)**

ಓ ಹೇ ಕೆ ಸರಿ ಇದೆ.

**ಹಿರಿಯ ದಿವಾಣಿ ನ್ಯಾಯಾಧೀಶರು,**
**ಕಲಘಟಗಿ.**